ಆ) ಸಾರಿಗೆ ಸಂಸ್ಥೆಯು ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿರುವ 22 ಕಿ.ಮೀ. ಅಂತರದವರೆಗೆ ಇರುವ ಗ್ರಾಮಗಳಿಗೆ ನಗರ ಹೊರವಲಯ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ.

(1) ಇಂಧನ ಸಾಮರ್ಥ್ಯವನ್ನು ಉತ್ತಮಗೊಳಿಸುವುದು.

(2) ಟೈರು ಕಿ.ಮೀ.ಗಳನ್ನು ಹೆಚ್ಚಿಸುವುದು.

(3) ಬಿಡಿಭಾಗಗಳ ಬಳಕೆಯನ್ನು ಕಡಿಮೆ ಗೊಳಿಸುವುದು.

(4) ಅನುಸೂಚಿಗಳನ್ನು ಆ ಸಾಮರ್ಥ್ಯ ರೀತಿಯಲ್ಲಿ ಕಾರ್ಯಾಚರಣೆ ಮಾಡಿ ವಾಹನ ಮತ್ತು ಸಿಬ್ಬಂದಿಗಳ ಹೆಚ್ಚಿನ ಉಪಯುಕ್ತತೆಪಡೆಯುವುದು.

(5) ಗೊತ್ತುಪಡಿಸಿದ ಅಧಿಕ ಭತ್ಯೆ ನೀಡುವುದನ್ನು ತಪ್ಪಿಸುವುದು.

(6) ಹಠಾತ್ ವಾಹನ ತಪಾಸಣೆಯನ್ನು ಹೆಚ್ಚಿಸುವುದು ಹಾಗೂ ಉತ್ತೇಜಿತ ತರಬೇತಿಯನ್ನು ಚಾಲಕ ಮತ್ತು ನಿರ್ವಾಹಕರಿಗೆ ನೀಡುವುದು.

ಬೆಂಗಳೂರು ನಗರದ ಕಾರ್ಯದಾರರ ಸೀಮೆ ಎಣ್ಣೆಯ ಅವಶ್ಯಕತೆಯ ಪ್ರಮಾಣ.

430 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಬೆಂಗಳೂರು ನಗರದ ಕಾರ್ಡುದಾರರ ಸೀಮೆಎಣ್ಣೆಯ ಅವಶ್ಯಕತೆಯನ್ನು ಪೂರೈಸಲು ಸೀಮೆಎಣ್ಣೆ ಪ್ರಮಾಣವೆಷ್ಟು ?

ಆ) ಇದರಲ್ಲಿ ತಿಂಗಳಿಗೆ ಸರಬರಾಜು ಆಗುತ್ತಿರುವ ಸೀಮೆ ಎಣ್ಣೆ ಪ್ರಮಾಣ ಎಷ್ಟು ?

ಇ) ಬೆಂಗಳೂರು ನಗರದ ಕಾರ್ಡುದಾರರಿಗೆ ವಾರ ವಾರಕ್ಕೆ ಸೀಮೆಎಣ್ಣೆಯನ್ನು ಸಮರ್ಪಕವಾಗಿ ಯಾವುದೇ ಕೊರತೆ ಇಲ್ಲದೆ ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ತಿಂಗಳಿಗೆ 15,400 ಕಿಲೋ ಲೀಟರ್ ಸೀಮೆಎಣ್ಣೆ ಬೇಕಾಗಿರುತ್ತದೆ.

ಆ) ನವೆಂಬರ್ 91ನೇ ಮಾಹೆಯಿಂದ ತಿಂಗಳಿಗೆ ಸರಾಸರಿಯಾಗಿ 10625 ಕಿಲೋ ಲೀಟರ್ ಸೀಮೆಎಣ್ಣೆಯನ್ನು ಬಿಡುಗಡೆ ಮಾಡಲಾಗುತ್ತಿದೆ.

ಇ) ಕೇಂದ್ರ ಸರ್ಕಾರ ರಾಜ್ಯಕ್ಕೆ ಹಂಚಿಕೆ ಮಾಡಿದ ಪ್ರಮಾಣವನ್ನು ಅವಲಂಬಿಸಿ ಕಾರ್ಡುದಾರರಿಗೆ ಸೀಮೆಎಣ್ಣೆಯನ್ನು ವಿತರಿಸಲಾಗುತ್ತಿದೆ. ತಿಂಗಳ 3 ವಾರಗಳಲ್ಲಿ ವಾರ ಒಂದಕ್ಕೆ ಪ್ರತಿ ಕಾರ್ಡಿಗೆ 4 ಲೀಟರ್ನಂತೆ ವಿತರಿಸುತ್ತಿದ್ದು, 4 ನೇ ವಾರದಲ್ಲಿ 3 ಲೀಟರ್ ಸೀಮೆಎಣ್ಣೆಯನ್ನು ಯಾವುದೇ ಕೊರತೆ ಇಲ್ಲದೆ ವಿತರಿಸಲಾಗುತ್ತಿದೆ.

ಕಾವೇರಿ ನೀರಿನ ಹಂಚಿಕೆ ಪ್ರತಿಭಟಿಸಿ ನಡೆದ ಗಲಭೆಯಲ್ಲಿ ಹಾನಿಯಾದ ವಾಹನಗಳು

432 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ನೀರಿನ ಹಂಚಿಕೆಯ ಬಗ್ಗೆ ಕಾವೇರಿ ಜಲ ವಿವಾದ ಮಂಡಳಿಯ ಮಧ್ಯಾಂತರ ತೀರ್ಪಿನ ರಾಜ್ಯಪತ್ರ ಪ್ರಕಟಣೆಯನ್ನು ಪ್ರತಿಭಟಿಸಿ ನಡೆದ ಗಲಭೆಯಲ್ಲಿ ಹಾನಿಗೊಳಗಾದ ಒಟ್ಟು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ನಗರ ಸಾರಿಗೆ ಒಟ್ಟು ವಾಹನಗಳ ಸಂಖ್ಯೆ.

ಆ) ಈ ಬಗ್ಗೆ ಆದ ಅಂದಾಜು ನಷ್ಟದ ಮೊತ್ತ

ಇ) ಸದರೀ ಮೊತ್ತವನ್ನು ವಿಮಾ ಸಂಸ್ಥೆಯಿಂದ ಪಡೆಯಲಾಗಿದೆಯೇ?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಾಹನಗಳು - 51

ಆ) ಬೆಂಗಳೂರು ನಗರ ಸಾರಿಗೆ ವಾಹನಗಳು -113

ಒಟ್ಟು 164

ಆ) ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಾಹನಗಳು ರೂ. 4,01,690-00

ಆ) ಬೆಂಗಳೂರು ನಗರ ಸಾರಿಗೆ ವಾಹನಗಳು 45,909-00

ಒಟ್ಟು 4,47,590-00

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ವಿಮಾ ಯೋಜನೆಯಿಂದ ಹೊರತುಪಡಿಸಲಾಗಿದೆ.

ಬೆಂಗಳೂರು ನಗರದ ಕಾರ್ಡುದಾರರಿಗೆ ತಿಂಗಳಿಗೆ ಹಂಚಿಕೆಯ ಪ್ರಮಾಣ

433 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಕಾರ್ಡುದಾರರಿಗೆ ಒಂದು ಯೂನಿಟ್ಗೆ ತಿಂಗಳಿಗೆ ಎಷ್ಟು ಪ್ರಮಾಣದ ಅಕ್ಕಿಯನ್ನು ನೀಡಲಾಗುತ್ತಿದೆ?

ಆ) ಯೂನಿಟ್ ಮೇರೆಗೆ ನೀಡಲಾಗುತ್ತಿರುವ ಅಕ್ಕಿಯ ಪ್ರಮಾಣವು ಸಾಕಾಗುವುದಿಲ್ಲವೆಂದು ಸರ್ಕಾರಕ್ಕೆ ತಿಳಿದಿದೆಯೇ?

ಇ) ಬೆಂಗಳೂರಿನಲ್ಲಿರುವ ಕಾರ್ಡುದಾರರಿಗೆ ಪ್ರತಿ ಯೂನಿಟ್ಗೆ ನೀಡಲಾಗುತ್ತಿರುವ ಅಕ್ಕಿಯ ಪ್ರಮಾಣವನ್ನು ಹೆಚ್ಚಿಸಲು ಯಾವುದಾದರೂ ಮನವಿ ಬಂದಿದೆಯೇ?

ಈ) ಹಾಗಿದ್ದರೆ ಸರ್ಕಾರವು ಒಂದು ಯೂನಿಟ್ಗೆ 3 ಕಿಲೋಗೆ ಹೆಚ್ಚಿಸುವುದೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಬೆಂಗಳೂರಿನ ಅನೌಪಚಾರಿಕ ಪಡಿತರ ಪ್ರದೇಶದ ಕಾರ್ಡುದಾರರಿಗೆ ಪ್ರತಿ ತಿಂಗಳಿಗೆ ಒಂದು ಯೂನಿಟ್ಗೆ $1\frac{1}{4}$ ಕೆ.ಜಿ. ಅಕ್ಕಿಯನ್ನು ಹಾಗೂ ಗರಿಷ್ಠ ಒಂದು ಕಾರ್ಡಿಗೆ $17\frac{1}{2}$ ಕೆ.ಜಿ. ಅಕ್ಕಿಯನ್ನು ನೀಡಲಾಗುತ್ತಿದೆ.

ಆ) ಇದು ಸಾಕಾಗುವುದು.

ಇ) ಇಲ್ಲ.